# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 236 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-07-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಎಷ್ಟು ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಪರಿಗಣಿಸಲಾಗಿದೆ;</td><td>ರಾಜ್ಯದಲ್ಲಿ 7 ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಪರಿಗಣಿಸಲಾಗಿದೆ.</td></tr>
<tr><td>ಆ)</td><td>ರಾಜ್ಯದ ಸ್ಮಾರ್ಟ್ ಸಿಟಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು;<br>(ಸ್ಮಾರ್ಟ್ ಸಿಟಿಗೆ ಆಯ್ಕೆಯಾದ ನಗರವಾರು ವಿವರ ನೀಡುವುದು, ಈ ಯೋಜನೆಗೆ ರಾಜ್ಯ ಸರ್ಕಾರವು ನೀಡಿರುವ ಅನುದಾನವೆಷ್ಟು)</td><td>ಸ್ಮಾರ್ಟ್ ಸಿಟಿ ಅಭಿಯಾನದಡಿ ಆಯ್ಕೆಯಾಗಿರುವ ನಗರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಗಿನಂತಿದೆ:
<table>
<tr><th rowspan="2">ಕ್ರಮ ಸಂ</th><th rowspan="2">ನಗರ</th><th colspan="3">ಬಿಡುಗಡೆಯಾಗಿರುವ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><th>ಕೇಂದ್ರ</th><th>ರಾಜ್ಯ</th><th>ಒಟ್ಟು</th></tr>
<tr><td>1</td><td>ಬೆಳಗಾವಿ</td><td>490.00</td><td>500.00</td><td>990.00</td></tr>
<tr><td>2</td><td>ದಾವಣಗೆರೆ</td><td>490.00</td><td>500.00</td><td>990.00</td></tr>
<tr><td>3</td><td>ಹುಬ್ಬಳ್ಳಿ-ಧಾರವಾಡ</td><td>490.00</td><td>500.00</td><td>990.00</td></tr>
<tr><td>4</td><td>ಮಂಗಳೂರು</td><td>416.50</td><td>426.50</td><td>843.00</td></tr>
<tr><td>5</td><td>ಶಿವಮೊಗ್ಗ</td><td>490.00</td><td>500.00</td><td>990.00</td></tr>
<tr><td>6</td><td>ತುಮಕೂರು</td><td>490.00</td><td>500.00</td><td>990.00</td></tr>
<tr><td>7</td><td>ಬೆಂಗಳೂರು</td><td>488.00</td><td>500.00</td><td>988.00</td></tr>
<tr><td colspan="2">ಒಟ್ಟು</td><td>3354.50</td><td>3426.50</td><td>6781.00</td></tr>
</table></td></tr>
<tr><td>ಇ)</td><td>ಸ್ಮಾರ್ಟ್ ಸಿಟಿ ಯೋಜನೆಯು ಯಾವಾಗ ಪ್ರಾರಂಭವಾಯಿತು; ಯಾವ ಅವಧಿಯಲ್ಲಿ ಈ ಯೋಜನೆಯು ಪೂರ್ಣಗೊಳ್ಳಬೇಕಿದೆ: (ವಿವರ ನೀಡುವುದು)</td><td>ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ದಿನಾಂಕ: 25.06.2015ರಂದು ಸ್ಮಾರ್ಟ್ ಸಿಟಿಗಳ ಅಭಿಯಾನಕ್ಕೆ ಚಾಲನೆ ನೀಡಿರುತ್ತದೆ.<br>ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಅಭಿಯಾನದ ಕಾಲಾವಧಿಯನ್ನು ಮಾರ್ಚ್-2025 ರವರಗೆ ವಿಸ್ತರಿಸಿದ್ದು, ಈ ಅವಧಿಯೊಳಗೆ ಅಭಿಯಾನದಡಿ ಕೈಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ.</td></tr>
<tr><td>ಈ)</td><td>ಸ್ಮಾರ್ಟ್ ಸಿಟಿ ಯೋಜನೆಯ ಅನ್ವಯ ಕಡ್ಡಾಯವಾಗಿ ಯಾವ ಯಾವ ಸೌಲಭ್ಯಗಳನ್ನು ನಗರದ ಜನತೆಗೆ ನೀಡಬೇಕಾಗಿದೆ? (ವಿವರ ನೀಡುವುದು)</td><td>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಯನುಸಾರ ಕೈಗೊಳ್ಳಬಹುದಾದ ಪ್ರಮುಖ ಮೂಲಭೂತ ಸೌಕರ್ಯಗಳು ಈ ಕೆಳಗಿನಂತಿವೆ;<br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ<br>• ಉದ್ಯಾನವನಗಳ ಅಭಿವೃದ್ಧಿ<br>• ಕೆರೆ ಹಾಗೂ ನದಿ ಪ್ರದೇಶಗಳ ಅಭಿವೃದ್ಧಿ<br>• ಒಳಚರಂಡಿ ಕಾಮಗಾರಿಗಳು<br>• ಮಾರುಕಟ್ಟೆಗಳ ಪುನರ್ ನವೀಕರಣ<br>• ಇಂಟಿಗ್ರೇಟೆಡ್ ಕಮಾಂಡ್ & ಕಂಟ್ರೋಲ್ ಸೆಂಟರ್ ಮತ್ತ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಸೇವೆಗಳು.<br>• ಕ್ರೀಡಾಂಗಣ/ಈಜುಕೊಳಗಳ ಅಭಿವೃದ್ಧಿ<br>• ಪಾರ್ಕಿಂಗ್ ಪ್ರದೇಶಗಳ ಅಭಿವೃದ್ಧಿ<br>• ಘನ ತ್ಯಾಜ್ಯ ನಿರ್ವಹಣೆ<br>ಅದರಂತೆ, ರಾಜ್ಯದ 7 ನಗರಗಳಲ್ಲಿ ಅಯಾ ನಗರಗಳ ನಗರ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಅನುಮೋದನೆ ನೀಡಿರುವ ಅವಶ್ಯ ಕಾಮಗಾರಿಗಳನ್ನು ನಗರಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಿದೆ.</td></tr>
</table>

ಸಂಖ್ಯೆ: ನಅಇ 108 ಸಿಎಸ್‌ಎಸ್ 2024

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು